ಸರಿಪಡಿಸುತ್ತೇನೆ. ಒಂದು ವೇಳೆ ಫ್ರಿಂಟ್‌ನಲ್ಲಿ ಬಿಟ್ಟು ಹೋಗಿದ್ದೇ ನಿಜವಾದರೆ ತಕ್ಷಣ ಅದನ್ನು ಇನ್‌ಕ್ಲೂಡ್ ಮಾಡಿಸುತ್ತೇನೆ.

4) ವೃತ್ತಿ ಶಿಕ್ಷಣ ನೌಕರರು 5 ದಿವಸಗಳಿಂದ ಉಪವಾಸ ಸತ್ಯಾಗ್ರಹ ಮಾಡುತ್ತಿರುವುದು.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದ ವೃತ್ತಿ ಶಿಕ್ಷಣ ನೌಕರರು ಕಳೆದ 5 ದಿವಸಗಳಿಂದ ಅಮರಣಾಂತ ಉಪವಾಸವನ್ನು ಮಾಡುತ್ತಿದ್ದಾರೆ. ಬಹುಶಃ ರಾಜ್ಯದ 80 ಸಾವಿರ ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಂತಹ, ಅವರಿಗೆ ಸ್ವಾವಲಂಬಿ ಜೀವನವನ್ನು ಕೊಡುವಂತಹ ಶಿಕ್ಷಣವನ್ನು ಕೊಡುವಂತಹ ಶಿಕ್ಷಕರೇ ಇವತ್ತು ತಮ್ಮ ವೃತ್ತಿಯಲ್ಲಿ ಅತಂತ್ರರಾಗಿದ್ದಾರೆ. ತಮ್ಮ ನ್ಯಾಯಯುತ ಬೇಡಿಕೆ ಈಡೇರಿಸಲು ಅವರು ಕೋರಿದ್ದಾರೆ. ತಮ್ಮನ್ನು ಖಾಯಮಾತಿಗೊಳಿಸಿ ಕೇವಲ ಎಂಟು ತಿಂಗಳಲ್ಲಿ ಮಾತ್ರ ತಮಗೆ ಬೇಕಾದಂತಹ ಸಂಬಳ, ಆದೂ ಕೂಡ ನಿಗದಿತ ಸಂಬಳ ಮಾತ್ರ ಬರುತ್ತಿದೆ. ಈ ನಿಟ್ಟಿನಲ್ಲಿ ತಮ್ಮನ್ನು ಖಾಯಮಾತಿಗೊಳಿಸಬೇಕೆಂದು ಹೇಳಿ ಕಳೆದ ಐದು ದಿವಸಗಳಿಂದ ಅಮರಣಾಂತ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಕಳೆದ ಒಂದು ವರ್ಷದಲ್ಲಿ ನಡೆಸಿದ ವಿವಿಧ ಹೋರಾಟದ ಸಮಯದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಯವರು ಖುದ್ದಾಗಿ ಮೂರು ತಿಂಗಳಲ್ಲಿ ಈ ಸಮಸ್ಯೆಯನ್ನು ಪರಿಹಾರ ಮಾಡುತ್ತೇನೆ ಎಂದು ಆಶ್ವಾಸನೆ ಕೊಟ್ಟ ಹಿನ್ನೆಲೆಯಲ್ಲಿ ಅವರು ಉಪವಾಸ ಸತ್ಯಾಗ್ರಹವನ್ನು ಹಿಂತೆಗೆದುಕೊಂಡಿದ್ದರು. ಒಂದು ವರ್ಷಕಾದರೂ, ಆದರಿಂದ ಯಾವುದೇ ಫಲಿತಾಂಶ ಬಾರದಿರುವ ಹಿನ್ನೆಲೆಯಲ್ಲಿ ಇವತ್ತು ಅನಿವಾರ್ಯವಾಗಿ ಉಪವಾಸ ಮಾಡುತ್ತಿದ್ದಾರೆ. ಉಪವಾಸ ನಿರತ 5 ಮಂದಿ ಗಂಭೀರ ಸ್ಥಿತಿಯಲ್ಲಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ 2,361 ವೃತ್ತಿ ಶಿಕ್ಷಣ ನೌಕರರನ್ನು ತಾವು ದಯವಿಟ್ಟು ಖಾಯಮಾತಿಗೊಳಿಸಬೇಕು, ರಾಜ್ಯ ಸರ್ಕಾರಕ್ಕೆ ಇದರಿಂದ ಕೇವಲ 7 ಕೋಟಿ ರೂಪಾಯಿಗಳಷ್ಟು ಮಾತ್ರ ಹೊರೆ ಬೀಳುತ್ತದೆ. ಹೀಗೆ ಮಾಡಿದಲ್ಲಿ ಸುಮಾರು 80 ಸಾವಿರ ವಿದ್ಯಾರ್ಥಿಗಳ ಜೀವನವನ್ನು ರೂಪಿಸುವುದಕ್ಕೆ ಸಾಧ್ಯವಾಗುತ್ತದೆ. ಎಂದು ಹೇಳುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಈಗ ತಾನೇ ಟೆಲಿಗ್ರಾಂ ಮೂಲಕ ನನಗೊಂದು ವಿಷಯ ಬಂದಿದೆ. ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ.

ಅಧ್ಯಕ್ಷರು : ಒಂದ ನಿಮಿಷ, ಇದು ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟ ವಿಚಾರವೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಅಲ್ಲ.

ಅಧ್ಯಕ್ಷರು : ಹಾಗಾದರೆ ಒಂದು ನಿಮಿಷ. ವೃತ್ತಿ ಶಿಕ್ಷಣಕ್ಕೆ ಸಂಬಂಧಪಟ್ಟ ಹಾಗೆ ಮೊದಲು ಸರ್ಕಾರದ ಪರವಾಗಿ ಉತ್ತರ ಕೊಡಲಿ. ನಂತರ ತಾವು ಮಾತನಾಡಬಹುದು.

ಶ್ರೀ ಹೆಚ್.ಡಿ. ದೇವೇಗೌಡ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಾನ್ಯ ಸದಸ್ಯರು ಹೇಳಿದಂತಹ ವಿಚಾರವನ್ನು ಸರ್ಕಾರವೂ ಗಮನಕ್ಕೆ ತೆಗೆದುಕೊಂಡಿದೆ. ಎಂದು ಹೇಳಬಯಸುತ್ತೇನೆ.

5. ಶಿರಗುಪ್ಪದಲ್ಲಿ ರಸ್ತೆ ಅಗಲ ಮಾಡುವ ಕಾರಣದಿಂದ ಅಂಗಡಿ-ಮಳಿಗೆಗಳ ಧ್ವಂಸ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಬಳ್ಳಾರಿ ಜಿಲ್ಲೆಯ ಶಿರಗುಪ್ಪದಲ್ಲಿ ಮೈನ್ ರೋಡ್‌ಗಳಲ್ಲಿ ಯಾವುದೇ ನೋಟೀಸನ್ನು ಕೊಡದೇ ರೋಡ್ ಅನ್ನು ಅಗಲ ಮಾಡುವಂತಹ ಕಾರಣ ಹೇಳಿ

ನಿನ್ನೆಯಿಂದ ಎಲ್ಲಾ ಅಂಗಡಿ ಮಳಿಗೆಗಳನ್ನು ದೊಡ್ಡ ದೊಡ್ಡ ಮನೆಗಳನ್ನು, ಯಾರು 40-50 ವರ್ಷಗಳಿಂದ ಅಲ್ಲಿ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಅವುಗಳನ್ನು ಯಾವುದೇ ನೋಟೀಸು ಕೊಡದೇ ಕೆಡವುವಂತಹ ಕೆಲಸ ಅಲ್ಲಿ ಪ್ರಾರಂಭ ಆಗಿದೆ. ಮತ್ತೆ ಬಹುಳ ಪ್ರಮುಖವಾಗಿ ಅಲ್ಲೊಂದು ಜೈನ ಮಂದಿರ ಇದೆ. ಸುಮಾರು ನೂರಾರು ವರ್ಷಗಳ ಪುರಾತನ ಜೈನ ಮಂದಿರ ಆದು. ಅದನ್ನೂ ಸಹ ಈಗ ಒಡೆಯುವುದಕ್ಕೆ ಪ್ರಾರಂಭವಾಗಬಹುದು ಎಂದು ಈಗತಾನೇ ನನಗೆ ಬಂದಿರುವ ಸುದ್ದಿಯಿಂದ ತಿಳಿದು ಬಂದಿದೆ. ನಾನೇನು ಹೇಳುವುದು ಏನೆಂದರೆ. ನೂರಾರು ವರ್ಷಗಳಿಂದ ಜಿಲ್ಲೆ ಅಂಗಡಿ ಮಳಿಗೆಗಳನ್ನು ಕಟ್ಟಿ ವಾಸ ಮಾಡುತ್ತಿದ್ದರೆ, ಅದಕ್ಕೆ ಸೂಕ್ತವಾದ ನೋಟೀಸ್ ಕೊಟ್ಟು ಕಾನೂನಿನಂತೆ ಕ್ರಮ ತೆಗೆದುಕೊಳ್ಳುವುದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಆದರೆ ಯಾವುದೇ ನೋಟೀಸ್ ಕೊಡದೇ ತರಾತುರಿಯಲ್ಲಿ ಬಿಲ್ಡಿಂಗ್ ಒಡೆಯುವಂತಾದ್ದು, ಮತ್ತು ಜೈನ ದೇವಸ್ಥಾನವನ್ನೂ ಸಹ ಒಡೆಯುವುದಕ್ಕೆ ಪ್ರಯತ್ನ ಮಾಡುತ್ತಿರುವಂತಾದ್ದು ಬಹುಶಃ ಲಾ ಅಂಡ್ ಆರ್ಡರ್‌ಗೆ ಪ್ರಾಬ್ಲಂ ಆಗಬಹುದು ಮತ್ತು ಜನರಿಗೂ ಸಹ ಒಂದು ಪ್ರಕ್ಷಿಬ್ಧ ವಾತಾವರಣ ಬರುವುದಕ್ಕೆ ತಾವು ಅವಕಾಶ ಕೊಡದೇ, ತಾವು ಈ ಬಗ್ಗೆ ದಯಾಮಾಡಿ ಒಂದು ಆದೇಶ ನೀಡಿ ಇದಕ್ಕೆ ಸೂಕ್ತವಾದಂತಹ ಒಂದು ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಸರ್ಕಾರ ಸೂಚನೆ ಕೊಟ್ಟು ಅದನ್ನು ತಡೆಹಿಡಿಯುವಂತಹ ಒಂದು ಆದೇಶವನ್ನು ಕೊಡಬೇಕೆಂದು ನಾನು ವಿನಂತಿಯನ್ನು ಮಾಡುತ್ತಿದ್ದೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ವಿರೋಧ ಪಕ್ಷದ ನಾಯಕರು ಈಗ ಪ್ರಸ್ತಾಪ ಮಾಡಿರತಕ್ಕ ವಿಷಯವು ಮೊನ್ನೆ ತಾನೇ ನನ್ನ ಗಮನಕ್ಕೆ ಬಂದಿತು. ಈಗಾಗಲೇ ನಾನು ಬಳ್ಳಾರಿ ಜಿಲ್ಲಾಧಿಕಾರಿಗಳಿಗೆ ಯಾವುದೇ ಕಟ್ಟಡಗಳನ್ನು ಒಡೆಯುವ ಅವಶ್ಯಕತೆ ಇಲ್ಲವೆಂದು ಹೇಳಿ ಸೂಚನೆಯನ್ನು ಕೊಟ್ಟಿದ್ದೇನೆ. ಅಂದ ಮಾತ್ರಕ್ಕೆ ಇದು ಬ್ಲ್ಯಾಂಕೆಟ್ ಗವರ್ನಮೆಂಟ್ ಡೈರೆಕ್ಷನ್ ಎಂದು ಯಾರೂ ಭಾವಿಸಿಕೊಳ್ಳ ಬೇಕಾಗಿಲ್ಲ. ಈ ಸರ್ಕಾರದ ನಿಲುವು ಏನೆಂದರೆ ಎಲ್ಲಾ ನಗರ ಪ್ರದೇಶಗಳಲ್ಲಿ ಇರತಕ್ಕಂತಹ ಅನಧಿಕೃತವಾಗಿ ಕಟ್ಟಿರತಕ್ಕಂತಹ ಕಟ್ಟಡಗಳು ಏನು ಇವೆ ಅವುಗಳಿಂದ ಸಾರ್ವಜನಿಕರಿಗೆ ಅಡಚಣೆ ಆಗದೆ ಹೋದರೆ, ರಸ್ತೆ ಮಾಡಬೇಕು, ಮತ್ತೊಂದು ಮಾಡಬೇಕು ಈ ತರಹ ಅಡಚಣೆ ಆಗದೆ ಹೋದರೆ ಅಂತಹ ಕಟ್ಟಡಗಳ ಮೇಲೆ ಹೆವೀ ಪೆನಾಲ್ಟಿ ಹಾಕಿ ನಾವು ಅವರವರಿಗೆ ಕನ್‌ಫರ್ಮ್ ಮಾಡಬೇಕು ಅನ್ನತಕ್ಕಂಥದ್ದರ ಬಗ್ಗೆ ಸರ್ಕಾರ ಒಂದು ನೀತಿಯನ್ನು ರೂಪಿಸಿದೆ. ಇಡೀ ಕರ್ನಾಟಕದ ಯಾವುದೇ ನಗರಸಭೆ ಇರಲಿ, ನಗರ ಪಾಲಿಕೆ ಇರಲಿ ಅಥವಾ ಟೌನ್ ಮುನಿಸಿಪಾಲಿಟಿ ಇರಲಿ ಅನಧಿಕೃತವಾಗಿ ಸರ್ಕಾರೀ ಜಾಗ ಆಗಿರಬಹುದು. ಪುರಸಭೆ ಜಾಗ ಆಗಿರಬಹುದು, ರೆವಿನ್ಯೂ ಜಾಗವಾಗಿರಬಹುದು ಕಟ್ಟಿರತಕ್ಕಂತಹ ಮನೆಗಳಿಗೆ ನಾವು ಅವರಿಗೆ ಕನ್‌ಫರ್ಮ್ ಮಾಡಿ ಹೆವಿಪೆನಾಲ್ಟಿ ಹಾಕತಕ್ಕಂಥದ್ದು ಈ ಸರ್ಕಾರದ ಉದ್ದೇಶ.

ಹಾಗೆ ಪೆನಾಲ್ಟಿ ಹಾಕುವಾಗ ಪಾಪುಲೇಷನ್‌ನ್ನು ಗಮನಕ್ಕೆ ತೆಗೆದುಕೊಳ್ಳುತ್ತೇವೆ. ಬೆಂಗಳೂರಿನಲ್ಲಿ ಒಂದು ರೀತಿ ಸ್ಕೇಲ್ ಬರಬಹುದು, ಜಿಲ್ಲಾ ಮಟ್ಟದಲ್ಲಿ ಒಂದು ಸ್ಕೇಲ್ ಬರಬಹುದು, ಕೆಲವು ನಗರ ಪಾಲಿಕೆ ಬೆಂಗಳೂರಿಗಿಂತ ಕಡಿಮೆ ಜನಸಂಖ್ಯೆ. ಇರತಕ್ಕಂಥದ್ದರಲ್ಲಿ ಕೆಲವು ಸ್ಕೇಲ್ ಬರಬಹುದು. ಆ ಸ್ಲ್ಯಾಬ್‌ನ್ನು ಫಿಕ್ಸ್ ಮಾಡುವಾಗ ಅದರ ಬಗ್ಗೆ ನಾನು ಹೇಳಿದ್ದೇನೆ. ಆದರೆ ಈ ಸಂದರ್ಭದಲ್ಲಿ ಒಂದೇ ಒಂದು ಸೂಚನೆ ಕೊಡಬೇಕಾಗುತ್ತದೆ. ಎಲ್ಲಿ ಸಾರ್ವಜನಿಕರಿಗೆ ಅತೀ ಅವಶ್ಯಕವಾಗಿ ಈ ಜಾಗ ಬೇಕಾಗುತ್ತದೆ ಅಂತಹ ಸನ್ನಿವೇಶದಲ್ಲಿ ನಾವು ಮನೆ ಕೆಡುವುದಕ್ಕಿಂತ ಮುಂಚೆ ನಾವು ನೋಟೀಸ್ ಕೊಡುತ್ತೇವೆ. ಜೈನ ಮಂದಿರ ಕೆಡುವ ಪ್ರಶ್ನೆಯೇ ಇಲ್ಲ. ನಿಲ್ಲಿಸಿದ್ದೇವೆಂದು ಹೇಳಿದ್ದಾರೆ. ಮೊನ್ನೆನೇ ಸೂಚನೆ ಕೊಟ್ಟಿದ್ದೇನೆಂದರು ಹೇಳಿದ್ದೇನೆ. ಅದರ ಜೊತೆಗೆ

ಅವರಿಗೆ ಪರ್ಯಾಯವಾಗಿ ಬೇರೆ ಕಡೆ ಮನೆ ಎಲ್ಲೂ ಇಲ್ಲದೇ ಇದ್ದರೆ ಪರ್ಯಾಯವಾಗಿ ಅವರಿಗೆ ಮನೆ ಕಟ್ಟಿಕೊಳ್ಳುವುದಕ್ಕೆ ಬೇರೆ ಜಾಗ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿ ಪಡುತ್ತೇನೆ. ಅದರ ಜೊತೆಗೆ ಇನ್ನೊಂದು ಮಾತು ನಾನು ಹೇಳುತ್ತೇನೆ. ಇಡೀ ರಾಜ್ಯದಲ್ಲಿ ಯಾರೇ ಪಂಚಾಯಿತಿ ವ್ಯಾಪ್ತಿಯಲ್ಲಿ ಗುಡಿಸಲು ಹಾಕಿಕೊಂಡಿರಲಿ, ಮನೆಗಳನ್ನು ಕಟ್ಟಿಕೊಂಡಿರಲಿ ಅದು ಗವರ್ನಮೆಂಟ್ ಜಾಗ ಇದ್ದರೆ. ಪಂಚಾಯಿತಿ ಜಾಗ ಅಥವಾ ಬಗರ್ ಹುಕುಂ ಜಾಗವಿದ್ದರೆ ಖಿರಾರ್ ಜಾಗವಿದ್ದರೆ ಅಂತಹ ಜಾಗಗಳಲ್ಲಿ ಇವರು ಗುಡಿಸಲು ಹಾಕಿಕೊಂಡಿರಲಿ, ಮನೆ ಕಟ್ಟಿಕೊಂಡಿರಲಿ ಅದನ್ನು ತೆಗೆಯಬಾರದು ಅವರವರಿಗೇ ನಾವು ಓನರ್‌ಷಿಪ್ ಸರ್ಟಿಫಿಕೇಟ್ ಕೊಡಬೇಕು, ಒಂದು ವೇಳೆ ಅಲ್ಲಿ ಏನಾದರೂ ಬೇರೆ ಸಾರ್ವಜನಿಕವಾಗಿ ನಮಗೆ ಆ ಜಾಗ ಬೇಕೆಂದಾಗ ಮಾತ್ರ ನಾವು ಅದನ್ನು ತೆಗೆದುಕೊಳ್ಳಬೇಕಾಗುತ್ತದೆ. ಅವರಿಗೆ ಪರ್ಯಾಯವಾಗಿ ಬೇರೆ ವ್ಯವಸ್ಥೆ ಕೂಡ ಮಾಡಿಕೊಡಬೇಕೆಂದು ಸರ್ಕಾರ ಈಗಾಗಲೇ ಕಟ್ಟುನಿಟ್ಟಾಗಿ ಸೂಚನೆ ಕೊಟ್ಟಿದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಸಿದ್ದರಾಮಯ್ಯ (ಹಣಕಾಸು ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಭಾರತದ ನಿಯಂತ್ರಕರು ಹಾಗೂ ಮಹಾಲೇಖಪಾಲಕರವರು ನೀಡಿರುವ ಕರ್ನಾಟಕ ಸರ್ಕಾರದ 1995ನೇ ಸಾಲಿನ ಮಾರ್ಚ್ 31ರ ಅಂತ್ಯಕ್ಕೆ ಕೊನೆಗೊಂಡಂತೆ (ವಾಣಿಜ್ಯಕ್ಕೆ) ಸಂಬಂಧಿಸಿದ ಲೆಕ್ಕಪರಿಶೋಧನಾ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಮಂತ್ರಿಗಳು) : ಸನ್ಮಾನ್ಯ ಸಭಾಧ್ಯಕ್ಷರೆ, 1952ನೇ ಸಾಲಿನ ವಿಚಾರಣಾ ಆಯೋಗಗಳ ಕಾಯ್ದೆಯ 3(4) ನೇ ಕಲುಮಿನ ಮೇರೆಗೆ ದಿನಾಂಕ 8ನೇ ಜೂನ್, 1992ರಂದು ಕುಣಿಗಲ್‌ನಲ್ಲಿ ನಡೆದ ಪೋಲಿಸ್ ಗೋಲಿಬಾರ್ ಬಗ್ಗೆ ಜಸ್ಟೀಸ್ ಎಂ.ಎಸ್. ಪಾಟೀಲ್ ಅವರ ವಿಚಾರಣಾ ಆಯೋಗದ ವರದಿ (ಮೆಮೋರಾಂಡಂ ಸಹಿತ) ಯನ್ನು ಸಭೆಯ ಮುಂದಿಡುತ್ತೇನೆ.

ವರದಿಗಳನ್ನೊಪ್ಪಿಸುವುದು

ಶ್ರೀ ಪ್ರಕಾಶ್ ಹುಕ್ಕೇರಿ (ಮಹಿಳಾ ಕಲ್ಯಾಣ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಮಿತಿಯ ಮೊದಲನೇ ವರದಿಯನ್ನು ಸಭೆಯ ಮುಂದಿಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಸಹಕಾರ ಇಲಾಖಾ ವಿಷಯ ಸಮಿತಿಯ ಅಧ್ಯಕ್ಷರ ಪರವಾಗಿ) : ಮಾನ್ಯ ಅಧ್ಯಕ್ಷರೆ, 1995-96ನೇ ಸಾಲಿನ ಕೃಷಿ ಮಾರುಕಟ್ಟೆಗೆ ಸಂಬಂಧಿಸಿದ ಎರಡನೆಯ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

(ಉಪಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಗಮನ ಸೆಳೆಯುವ ಸೂಚನೆ

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17ರ ಶರಾವತಿ ಸೇತುವೆ ರಿಪೇರಿಯಾಗದಿರುವುದರಿಂದ ಸಾರ್ವಜನಿಕರಿಗೆ ಹಾಗೂ ವಾಹನಗಳ ಓಡಾಟಕ್ಕೆ ಉಂಟಾಗಿರುವ ತೊಂದರೆ .

ಡಾ|| ಯು. ಚಿತ್ತರಂಜನ್ (ಭಟ್ಕಳ) : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 17ರ ಶರಾವತಿ ಸೇತುವೆ ರಿಪೇರಿಯಾಗದಿರುವುದರಿಂದ ಸಾರ್ವಜನಿಕರಿಗೆ